O.S. NO. 161/2023

PW - 1.

Dated 17-06-2025

ಸಾಕ್ಷಿಯನ್ನು ಈ ದಿನ ದಿನಾಂಕ 17 -06-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆರ್ ಎಸ್ ಎಮ್ ವಕೀಲರಿಂದಃ

ಪ್ರಸ್ತುತ ದಾವೆ ನನಗೆ ಆಸ್ತಿ ಕೊಟ್ಟಿಲ್ಲದ ಕಾರಣ ಮಾಡಿರುತ್ತೇನೆ. ಆಸ್ತಿ ಎಂದರೆ ಹೊಲ ಇರುತ್ತದೆ. ನಮ್ಮ ಮತ್ತು ಪತಿವಾದಿ ಕುಟುಂಬಕ್ಕೆ ಮೆಗಳು ಇರುತ್ತವೆ ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರಸ್ತುತ ದಾವೆಯ ವಾದ ಪತ್ರ ಬರೆಯಲು ವಕೀಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನ್ನ ಗಂಡ ನಾಗಪ್ಪನ ಮೂಲಕ ಉದ್ಯೋಗ ಶೇತ್ಕಿ ಇತ್ತು. ನನ್ನ ಗಂಡ ಬೇರೆಯವರ ಹೊಲ ಮಾಡುತ್ತಿದ್ದರು ಎಂದರೆ ನಮ್ಮ ಹೊಲ ಮಾತ್ರ ಮಾಡುತ್ತಿದರು ಎಂದು ನುಡಿದಿರುತ್ತಾರೆ. ನನ್ನ ಗಂಡ ಬೇರೆಯವರ ಹೊಲ ಪಾಲಿನಿಂದ ಮಾಡುತ್ತಿದ್ರೂ ಸಹ ಮಾಡುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು 4 ಸರ್ವೆ ನಂಬರಗಳು ಇರುತ್ತವೆ. ದಾವಾ ಜಮಿನುಗಳು ನಮ್ಮ ಕುಟುಂಬಕ್ಕೆ ಹೆಗೆ ಬಂದಿರುತ್ತವೆ ಎಂದು ಹೇಳಲು ಬರುವುದಿಲ್ಲ. ದಾವಾ ಅನುಸೂಚಿ ಆಸ್ತಿಗಳ ಪೈಕಿ ಅನುಕ್ರಮ 1 ಮತ್ತು 3 ನಮ್ಮ ಕುಟುಂಬ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪ್ರಸ್ತುತ ಸದರಿ 2 ಜಮಿನುಗಳು ಆಸ್ತಿ ಕ್ರಮ ಸಂಖ್ಯೆ 1 ಮೊದಲು ನನ್ನ ಗಂಡನ ಹೆಸರಿನಲ್ಲಿ ಇತ್ತು ಈಗ ನನ್ನ ಮಗನ ಹೆಸರಿನಲ್ಲಿ ಇರುತ್ತದೆ. ನನ್ನ ಮಗನ ಹೆಸರಿನಲ್ಲಿ ಇರುತ್ತದೆ ಎನ್ನುವುದು ಸುಳ್ಳು ಎಂದರೆ

ಸರಿಯಲ್ಲ. ಅದು ನಾವು ವಾದಿಯರು ಮತ್ತು ಪ್ರತಿವಾದಿಯರ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಆಸ್ತಿ ಕ್ರಮ ಸಂಖ್ಯೆ 3 2 ನೇ ಪ್ರತಿವಾದಿ ರಾಮಲಿಂಗಪ್ಪನ ಹೆಸರಿನಲ್ಲಿ ಇರುತ್ತದೆ. ಅದು 2 ನೇ ಪ್ರತಿವಾದಿ ಹೆಸರಿಗೆ ಹೇಗೆ ಮತ್ತು ಏಕೆ ಬಂತು ಎಂದರೆ ಸಾಕ್ಷಿ ಮನೆ ಲೆಕ್ಕ ಹಾಕಿ ಆಸ್ತಿ ಹೆಚ್ಚು ಕಡಿಮೆ ಹಿರಿಯರು ಇಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಡೈರಿ ನಂ. 8322 2000 ನೇ ಸಾಲಿನಲ್ಲಿ ಮಂಜೂರು ಆಗಿರುತ್ತದೆ ಎಂದರೆ ಸರಿ. ಸದರಿ ಈಗ ತೋರಿಸಿದ ನಿಪಿ - 12 ಪ್ರಕಾರ ಡೈರಿ ನಂ 8322 ರ ಪ್ರಕಾರ 2 ನೇ ಪ್ರತಿವಾದಿ ಗೆ 2 ಎಕರೆ 25 ಗುಂಟೆ ಮಾತ್ರ ಕೊಟ್ಟಿದ್ದು ತೋರಿಸಿರುತ್ತಾರೆ ಎಂದರೆ ಸರಿ. ಕಂದಾಯ ಇಲಾಖೆಯೊಂದಿಗೆ 2 ನೇ ಪ್ರತಿವಾದಿ ಮಿಾಲಾಪಿ ಆಗಿ ತನ್ನ ಹೆಸರು ಪೊಕಳ ಹಚ್ಚಿಸಿಕೊಂಡಿರುತ್ತಾನೆ ಎಂದರೆ ಸಾಕ್ಷಿ ಹಿರಿಯರು ಕೂಡಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಅನೂಸೂಚಿ ಬಿ ಆಸ್ತಿ ಕ್ರಮ ಸಂಖ್ಯೆ 2 ಮತ್ತು 4 ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ . ಸಾಕ್ಷಿ ನಾನು ಶಾಲೆ ಕಲಿತಿಲ್ಲದ ಕಾರಣ ಹೇಳಲು ಬರುವುದಿಲ್ಲ ಎಂದು ಪುನಃ ನುಡಿದಿರುತ್ತಾರೆ. ನಿಪಿ - 11 ನಾನೇ ಹಾಜರು ಮಾಡಿರುತ್ತೇನೆ ಎಂದರೆ ಸರಿ. ನಿಪಿ - 11 ರ ಪ್ರಕಾರ ಆಸ್ತಿಯನ್ನು ಸರ್ವೆ ನಂ 588/2 ಮತ್ತು 484/1 ಆಸ್ತಿಗಳನ್ನು ಈರಪ್ಪ ನಾಗಪ್ಪ ಗಂಟಿ ರೂ. 95 ಸಾವಿರ ಗಳಿಗೆ ಖರೀದಿ ಮಾಡಿರುತ್ತಾರೆ ಎಂದು ತೋರಿಸಿದ್ದಾರೆ ಎಂದರೆ ಸರಿ. ಸದರಿ ನಿಪಿ - 11

ಖರೀದಿ ಕಾಗದ ಆದಾರದ ಮೇಲ ಡೈರಿ ನಂ 7755 ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಇವತ್ತಿಗೂ ಸಹ ಸದರಿ ಆಸ್ತಿಗಳು 1 ನೇ ಪ್ರತಿವಾದಿ ಕಬ್ಜಾದಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಆಸ್ತಿ ಅನುಕ್ರಮ ಸಂಖ್ಯು 2 ಮತ್ತು 4 ನಿಪಿ - 11 ರಲ್ಲಿ ತೋರಿಸಿದಂತೆ ಖರೀದಿ ಮಾಡಿದ ಕುರಿತು ನನ್ನ ವಾದ ಪತ್ರದಾಗ್ಲಲಿ ಅಥವಾ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿ ಕ್ರಮ ಸಂಖ್ಯೆ 2 ಮತ್ತು 4 ನೇ ಆಸ್ತಿಗಳು 1 ನೇ ಪ್ರತಿವಾದಿಯ ಪ್ರತ್ಯೆಕ ಆಸ್ತಿಗಳು ಇದ್ದರೂ ಸಹ ಅದರಲ್ಲಿ ಪಾಲು ಪಡೆಯಬೇಕು ಎಂಬ ದುರುದ್ದೇಶದಿಂದ ಪ್ರಸ್ತುತ ದಾವೆಯಲ್ಲಿ ಸೇರಿಸಿರುತ್ತೇನೆ ಎಂರದೆ ಸರಿಯಲ್ಲ.

ದೊಡವಾಡದಲ್ಲಿ ಗೆಟ್ಟಿ ಮತ್ತು ಸಪಡ್ಲಿ ಅವರ ದೊಡ್ಡ ಕುಟುಂಬ ಇರುತ್ತವೆ ಎಂದರೆ ಸರಿ. ಸದರಿ ಗೆಟ್ಟಿ ಕುಟುಂಬದವರು ತಮ್ಮ ಕುಟುಂಬದ ಜಮಿನಗಳನ್ನು ಬೇರೆಯವರಿಗೆ ಮಾಡಲು ಕೊಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಗೆಟ್ಟಿ ಕುಟುಂಬದವರಿಗೆ ಸೇರಿದ 20 ಎಕರೆ ಜಮಿನು ನನ್ನ ಗಂಡ 1990 ರಿಂದ 1997-98 ರವರೆಗೆ ಪಾಲಿನಿಂದ ಮಾಡುತಿತದ್ದರು ಎಂದರೆ ಸರಿಯಲ್ಲ. ಅದೇ ರೀತಿ ಸಪಡ್ಲಿ ಕುಟುಂಬದವರ 8 ಎಕರೆ ಆಸ್ತಿಯನ್ನು ನನ್ನ ಗಂಡ 1990 ರಿಂದ 1997-98 ರವರೆಗೆ ಪಾಲಿನಿಂದ ಮಾಡಿದ್ದರು ಎಂದರೆ ಸರಿಯಲ್ಲ. ನಮ ಕುಟುಂಬದ ಪಿತ್ರಾರ್ಜಿತ ಆಸ್ತಿಯಿಂದ ಬಂದ ಉತ್ಪನ್ನದಿಂದ

ಉಪಜೀವನ ಮಾತ್ರ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಗಂಡ ಈ ಮೇಲೆ ಹೇಳಿದ 2 ಕುಟುಂಬದವರ ಜಮಿನನ್ನು ಪಾಲಿನಿಂದ ಮಾಡುತ್ತಿದ್ದುದರಿಂದ ಅವುಗಳಿಂದ ವರ್ಷಕ್ಕೆ 50 ಸಾವಿರ ಖರ್ಚು ತೆಗೆದು ನನ್ನ ಗಂಡನಿಗೆ ಉಳಿಯುತ್ತಿತ್ತು ಎಂದರೆ ಸರಿಯಲ್ಲ. ಹೀಗಾಗಿ ನನ್ನ ಗಂಡ ಸಾಕಷ್ಟು ಹಣ ಕೂಡಿಸಿ ಇಟ್ಟಿದ್ದರು ಎಂದರೆ ಸುಳ್ಳು.

ಹೀಗೆ ತಾನು ಕೂಡಿಸಿ ಇಟ್ಟ ಹಣದಿಂದ ದಾವಾ ಅನೂಸುಚಿ ಬಿ 2 ಮತ್ತು 4 ನೇ ಆಸ್ತಿಯನ್ನು 1996 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಿದನು ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಖರೀದಿ ಕಾಗದ ಆಧಾರ ಮೇಲೆ ಡೈರಿ ನಂ 7755 ಮಂಜುರು ಆಯಿತು ಎಂದರೆ ಸರಿ. ಸದರಿ ಖರೀದಿ ಕಾಲಕ್ಕೆ 1 ನೇ ಪ್ರತಿವಾದಿ ಅಲ್ಪವಹಿವು ಇದ್ದನು ಎಂದರೆ ಸರಿ. 2012 ರಲ್ಲಿ ಅಲ್ಪವಹಿ ಸಂರಕ್ಷಕ ಅಂತಾ ಎಮ್ ಆರ್ ನಂ ಎಚ್ 19 ರ ಪ್ರಕಾರ ನನ್ನ ಗಂಡನನ್ನು ಡಿಸಚಾರ್ಜ ಮಾಡಿದರು ಎಂದರೆ ಸರಿ. ಈ ಎಲ್ಲ ಹಕ್ಕಿಕತ್ತು ಎಲ್ಲ ನನಗೆ ಗೊತತ್ತಿದ್ದರು ಸಹ ನಾನು ಆಸ್ತಿಯಲ್ಲಿ ಪಾಲು ಪಡೆಯಬೇಕು ಅಂತಾ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನೂಸುಚಿ ಬಿ ಆಸ್ತಿ ಕ್ರಮ ಸಂಖ್ಯೆ 1 ಮತ್ತು 3 ರಲ್ಲಿ ಮಾತ್ರ ನಾವು ವಾದಿಯರಿಗೆ ಮತ್ತು 1 ನೇ ಪ್ರತಿವಾದಿ ಗೆ ತಲಾ 1/5 ಹಿಸ್ಸಾ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

O.S. NO. 161/2023

PW - 1.

Dated 17-06-2025

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.